**ಕರ್ನಾಟಕ ಸರ್ಕಾರ**

**ಆಡಳಿತ ತರಬೇತಿ ಸಂಸ್ಥೆ,**
**ಲಲಿತ ಮಹಲ್ ರಸ್ತೆ, ಮೈಸೂರು.**

ಸಂಖ್ಯೆ: ಕಟ್ಟಡ/ವಿವ:ಇತರೆ/2010-2011 ದಿನಾಂಕ: 28.2.2011

## ಸುತ್ತೋಲೆ

ವಿಷಯ: ಆಡಳಿತ ತರಬೇತಿ ಸಂಸ್ಥೆಯ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ವಿದ್ಯುಚ್ಛಕ್ತಿ ಹಾಗೂ ನೀರಿನ ಸೌಕರ್ಯವನ್ನು ಸಮರ್ಪಕವಾಗಿ ಬಳಸಿ ಮಿತವ್ಯಯ ಸಾಧಿಸುವ ವಿಚಾರ

*******

ಆಡಳಿತ ತರಬೇತಿ ಸಂಸ್ಥೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂರು ಸಂಸ್ಥೆಗಳಲ್ಲಿ ದೈನಂದಿನ ಕಛೇರಿ ಕೆಲಸಗಳು ಹಾಗೂ ತರಬೇತಿಗಳು ಸುಗಮವಾಗಿ ಅನುಷ್ಠಾನಗೊಳ್ಳಲು ಅನೇಕ ಆಧುನಿಕ ಸೌಕರ್ಯಗಳಾದಂತಹ ಗಣಕಯಂತ್ರಗಳು, ಜೆರಾಕ್ಸ್‌ಯಂತ್ರಗಳು, ಹವಾನಿಯಂತ್ರಕಗಳು ಹಾಗೂ ಇತರೆ ಆಧುನಿಕ ಯಂತ್ರಗಳನ್ನು ಅಳವಡಿಸಲಾಗಿದೆ. ಸದರಿ ಯಂತ್ರಗಳ ಬಳಕೆಗೆ ಹೆಚ್ಚಿನ ವಿದ್ಯುಚ್ಛಕ್ತಿಯ ಬಳಕೆಯಾಗುತ್ತದೆ. ಅಲ್ಲದೆ ಅನಾವಶ್ಯಕವಾಗಿ ದೀಪಗಳನ್ನು ಉರಿಸುವುದರಿಂದ ವಿದ್ಯುತ್ ಬಳಕೆ ಹೆಚ್ಚಾಗಿದೆ. ಬಿಡುವಿನ ಅವಧಿಯಲ್ಲಿ ಸಹ ಹವಾನಿಯಂತ್ರಕವನ್ನು ಜಾರಿ ಇಡುವುದರಿಂದ ಅನಾವಶ್ಯಕವಾಗಿ ವಿದ್ಯುತ್ ಬಳಕೆಯಾಗುತ್ತಿದೆ.

ಆಡಳಿತ ತರಬೇತಿ ಸಂಸ್ಥೆಯ ಹಾಗೂ ರಾನಸಂ ಮತ್ತು ಅನರಾಗ್ರಾಸಂನ ಅಧಿಕಾರಿ/ಸಿಬ್ಬಂದಿವರ್ಗದವರು ವಿದ್ಯುಚ್ಛಕ್ತಿಯನ್ನು ಮಿತವಾಗಿ ಬಳಸಲು ಸೂಚಿಸಲಾಗಿದೆ. ತರಬೇತಿ ಕೊಠಡಿಗಳಲ್ಲಿ ತರಬೇತಿ ಶುರುವಾಗುವ 15 ನಿಮಿಷಗಳಿಗೆ ಮುಂಚಿತವಾಗಿ ಹವಾನಿಯಂತ್ರಕಗಳನ್ನು ಪ್ರಾರಂಭಿಸಬೇಕು ಹಾಗೂ ತರಬೇತಿ ಮುಕ್ತಾಯವಾದ ತಕ್ಷಣ ಹವಾನಿಯಂತ್ರಕಗಳನ್ನು ಹಾಗೂ ದೀಪಗಳನ್ನು ಆರಿಸಬೇಕು. ಕಛೇರಿಯಲ್ಲಿರುವ ದೀಪಗಳು, ಫ್ಯಾನ್‌ಗಳು, ಗಣಕಯಂತರಗಳು ಹಾಗೂ ಜೆರಾಕ್ಸ್‌ಯಂತ್ರಗಳನ್ನು ಮಿತವಾಗಿ ಬಳಸಬೇಕು ಹಾಗೂ ಕಛೇರಿ ಅವಧಿ ಮುಗಿದ ನಂತರ ಸದರಿ ಯಂತ್ರಗಳನ್ನು ಕಡ್ಡಾಯವಾಗಿ ಆರಿಸ ಬೇಕು.

ಆಡಳಿತ ತರಬೇತಿ ಸಂಸ್ಥೆಯಲ್ಲಿ ಲಭ್ಯವಿರುವ ನೀರಿನ ಸೌಕರ್ಯವನ್ನು ಮಿತವಾಗಿ ಬಳಸಬೇಕು ಹಾಗೂ ಅನಾವಶ್ಯಕವಾಗಿ ನೀರು ಪೋಲಾಗುವುದನ್ನು ತಡೆಗಟ್ಟಲು ಎಲ್ಲರೂ ಕ್ರಮವಹಿಸಬೇಕು.

ಆಡಳಿತ ತರಬೇತಿ ಸಂಸ್ಥೆಯ ಎಲ್ಲಾ ಅಧಿಕಾರಿ/ಸಿಬ್ಬಂದಿವರ್ಗದವರು ವಿದ್ಯುಚ್ಛಕ್ತಿ ಹಾಗೂ ನೀರಿನ ಸೌಕರ್ಯವನ್ನು ಜಾಗರೂಕತೆಯಿಂದ ಬಳಸಿ ಆಡಳಿತ ತರಬೇತಿ ಸಂಸ್ಥೆಯನ್ನು "Green Campus" ಆಗಿ ಪರಿವರ್ತಿಸಲು ಶ್ರಮವಹಿಸಬೇಕಾಗಿ ಸೂಚಿಸಿದೆ.

1/3/20X

ಮಹಾ ನಿರ್ದೇಶಕರು

<u>ಪ್ರತಿಯನ್ನು:</u>

1. ಮಹಾ ನಿರ್ದೇಶಕರ ಆಪ್ತ ಶಾಖೆ, ಆತಸಂ, ಮೈಸೂರು
2. ನಿರ್ದೇಶಕರು, ರಾನಸಂ, ಮೈಸೂರು
3. ನಿರ್ದೇಶಕರು, ಅನರಾಗ್ರಾಸಂ, ಮೈಸೂರು
4. ಜಂಟಿ ನಿರ್ದೇಶಕರು (ಆಡಳಿತ)/(ತರಬೇತಿ), ಆತಸಂ, ಮೈಸೂರು
5. ಪತ್ರಾಂಕಿತ ವ್ಯವಸ್ಥಾಪಕರು, ಆತಸಂ, ಮೈಸೂರು
6. ಲೆಕ್ಕ ಅಧೀಕ್ಷಕರು, ಆತಸಂ, ಮೈಸೂರು
7. ಕಾರ್ಯಕ್ರಮ ಸಹಾಯಕರು, ಆತಸಂ, ಮೈಸೂರು
8. ಆಡಳಿತ ತರಬೇತಿ ಸಂಸ್ಥೆಯ ಎಲ್ಲಾ ಬೋಧಕವರ್ಗದವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
9. ಆಡಳಿತ ತರಬೇತಿ ಸಂಸ್ಥೆಯ ಎಲ್ಲಾ ಸಿಬ್ಬಂದಿವರ್ಗದವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
10. ಕಛೇರಿ ಪ್ರತಿ.

Do you Know?

Monthly ATI campus Electricity Bill is Rs. 3.0 Lakhs and more……







You can make a difference !

Switch OFF Lights / Fixtures

when not required…….!